



## ಯಕ್ಷ ರಂಗೋಲಿ


ಕನ್ನಡ ಕಲರವಕ್ಕೆ ಕೊನೆಯಿಲ್ಲ. ಕೆಂಪು ಹಳದಿ ಬಣ್ಣಗಳ ಮೆರವಣಿಗೆಗೆ ಮಿತಿಯಿಲ್ಲ. ಬೆಂಗಳೂರಿನ ನಾಗೇಗೌಡನ ಪಾಳ್ಯದ ಪ್ರೆಸ್ಟೀಜ್ ಫ್ರಿಮ್ ರೋಜ್ ವಸತಿ ಸಮುಚ್ಚಯದಲ್ಲಿ ನಾಲ್ಕು ದಿನಗಳ ನಾಡು ನುಡಿ ಸಂಭ್ರಮ ಅದ್ದೂರಿಯಾಗಿ ನಡೆಯಿತು. ಅಲ್ಲಿ ಕಂಡುಬಂದದ್ದೇ ಈ ಯಕ್ಷ ರಂಗೋಲಿ. ಸುಬ್ರಮಣ್ಯ ಚಿಟ್ಟಾಣಿ ಅವರ ತಂಡದ ಯಕ್ಷಗಾನ ಪ್ರದರ್ಶನದ ದಿನವೇ ರಂಗೋಲಿ ಸ್ಪರ್ಧೆ ಆಯೋಜನೆಗೊಂಡಿತ್ತು. ಅಂದು ವಿಜಯ ದುರ್ಗಾ ಅವರು ಈ ಸುಂದರ ರಂಗೋಲಿ ಬಿಡಿಸುವ ಮೂಲಕ ಯಕ್ಷ ಕಲಾವಿದರನ್ನು ಸ್ವಾಗತಿಸಿದರು. ರಂಗೋಲಿ ಸ್ಪರ್ಧೆಯಲ್ಲಿ ಮೊದಲ ಬಹುಮಾನಕ್ಕೂ ಪಾತ್ರರಾದರು. ಕನ್ನಡ ಉಸಿರಾದಾಗ ಮಾತ್ರ ಈ ರೀತಿ ಅಭಿವ್ಯಕ್ತಿ ಸಾಧ್ಯ ಅಲ್ಲವೇ?

–ವಾ.ಮುರಳೀಧರ, ತೀರ್ಥಹಳ್ಳಿ

## ಅಲ್ಗುಣಿ ಮಣೆ

ದಸರಾ ಗೊಂಬೆ ನೋಡಲು ಹರಿಹರದಲ್ಲಿ ನನ್ನ ಸ್ನೇಹಿತೆ ರಾಜೇಶ್ವರಿ ರಾಜು ಮನೆಗೆ ಹೋಗಿದ್ದೆ. ಅಲ್ಲಿ ನನ್ನನ್ನು ಬಹುವಾಗಿ ಆಕರ್ಷಿಸಿದ್ದು ಈ 'ಚನ್ನಮಣೆ'. ಇದನ್ನು 'ಅಲ್ಗುಳಿಮಣೆ' ಅಥವಾ 'ಅಲ್ಗುಣಿ ಮಣೆ' ಎಂದೂ ಕರೆಯುತ್ತಾರೆ. ತೆಲುಗಿನಲ್ಲಿ 'ಪಲ್ಲಂಗುಳಿ' ಎನ್ನುತ್ತಾರೆ. ಕಳಸದಲ್ಲಿ ಅವರ ಅಜ್ಜಿಮನೆಯಲ್ಲಿದ್ದ ಈ ಅಲ್ಗುಣಿ ಮಣೆಯು ಐದು ತಲೆಮಾರನ್ನೂ, ಸುಮಾರು 140 ಸಂವತ್ಸರಗಳನ್ನೂ ಕಂಡಿದೆ. ಹೆಬ್ಬಲಸಿನ ಮರದಿಂದ ತಯಾರಿಸಲಾದ ಈ ಮಣೆಯಲ್ಲಿ ಚಿತ್ರಿತವಾದ ಸುಂದರ ಹೂವುಗಳು ಒಂದು ಇದ್ದಂತೆ ಒಂದಿಲ್ಲ. ಅಂಚುಗಳ ಕೆತ್ತನೆ, ಒಂದು ಮನೆಯಿಂದ ಒಂದು ಮನೆ ಮಧ್ಯೆ ಇರುವ ಪಟ್ಟಿಗಳು ಇದರ ಅಂದವನ್ನು ಮತ್ತಷ್ಟು ಹೆಚ್ಚಿಸಿವೆ. ಹೆಬ್ಬಲಸು ತಿನ್ನಲು ಯೋಗ್ಯವಾದ ಹಣ್ಣಲ್ಲ. ಅದರ ಕಟ್ಟಿಗೆ ಮಾತ್ರ ಬಹಳ ಗಟ್ಟಿ. ಆದ್ದರಿಂದ ಪೀಠೋಪಕರಣಗಳ ತಯಾರಿಕೆಗಾಗಿ ತೋಟಗಳ ಅಂಚಿನಲ್ಲಿ ಈ ಮರಗಳನ್ನು ಬೆಳೆಸುತ್ತಾರೆ.

–ಸೀತಾ ಎಸ್., ನಾರಾಯಣ, ಹರಿಹರ



## ಕಾನನದ ಹೊಗೆಸೊಪ್ಪು

ಸಿಲೋನ್ ಮತ್ತು ಭಾರತದ ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಬೆಳೆಯುವ ನೈಸರ್ಗಿಕ ತಂಬಾಕಿನ ಗಿಡ ಇದು. ಇದರ ಎಲೆಯನ್ನು ವೀಳ್ಯದೆಲೆಯೊಂದಿಗೆ ಸೇವಿಸುವುದಿಲ್ಲ. ಇದು ನಶೆಯ ಅಂಶವನ್ನೂ ಹೊಂದಿಲ್ಲ. ನೋಡಲು ತಂಬಾಕಿನ ಎಲೆಗಳಂತಿರುವ ಕಾರಣ ಈ ಹೆಸರು ಬಂದಿರಬಹುದು. 'ಲೋಬೆಲಿಯಾ ನಿಕೋಟಿಯಾ ನಿಫೋಲಿಯಾ' ಎಂಬ ವೈಜ್ಞಾನಿಕ ಹೆಸರು ಹೊಂದಿರುವ ಈ ಬಹುವಾರ್ಷಿಕ ಸಸ್ಯವನ್ನು ಸಂಸ್ಕೃತದಲ್ಲಿ ಮೃತ್ಯು ಪುಷ್ಪ, ಸುರದ್ರುಮ ಎಂದೂ ಕರೆಯಲಾಗುತ್ತದೆ. ವಿಷಕಾರಿಯಾದರೂ ಇದರ ಎಲೆಗಳನ್ನು ಚೇಳು, ಜೇಡದಂತಹ ಕೀಟಗಳ ಕಡಿತ ಶಮನಕ್ಕೆ ಬಳಸಲಾಗುತ್ತದೆ. ಒಣಗಿದ ಕಡ್ಡಿಗಳನ್ನು ಅಸ್ತಮಾ ರೋಗಿಗಳು ಬೀಡಿಯಂತೆ ಸೇದುವುದರಿಂದ ಉಸಿರಾಟದ ತೊಂದರೆ ನೀಗುತ್ತದೆ ಎಂಬುದು ಜನರ ನಂಬಿಕೆ. ಇದು ಚಾರ್ಮಾಡಿ ಘಾಟಿಯ ಕಾಡಿನಲ್ಲಿ ಕಂಡುಬಂತು.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



## ಮನ ಸೆಳೆಯುವ ಹೂವಿನ ಗಡಿಯಾರ

ಪ್ರಕೃತಿಯ ಅದ್ಭುತ ಸೃಷ್ಟಿಯನ್ನು ಊಹೆ ಮಾಡಲು ಸಾಧ್ಯವೇ ಇಲ್ಲ. ಚಿತ್ರದಲ್ಲಿ ಕಾಣುತ್ತಿರುವ ಹೂವು ಪ್ಯಾಷನ್ ಫ್ರೂಟ್ ಗಿಡದ್ದು. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಗಡಿಯಾರದ ರಚನೆಯನ್ನೇ ಹೋಲುವ ಈ ಹೂವಿನಲ್ಲಿ ಮೊದಲು ಸ್ವಲ್ಪ ದೊಡ್ಡದಾದ ಗಂಟೆಯನ್ನು, ನಿಮಿಷವನ್ನು ಮತ್ತು ಸೆಕೆಂಡ್ ಅನ್ನು ಸೂಚಿಸುವ ಮುಳ್ಳುಗಳಂತಹ ರಚನೆ ಇದೆ. ಗಂಟೆಯ ಸಂಖ್ಯೆಯನ್ನು ಸೂಚಿಸುವ ರಚನೆ, ಸೆಕೆಂಡನ್ನು ಪ್ರತಿನಿಧಿಸುವಂತಹ ಚಿಕ್ಕ ಚಿಕ್ಕ ಗೆರೆ ಮಾದರಿಯ ರಚನೆಯಿದೆ. ಈ ಹೂವನ್ನು ನೋಡಿಯೇ ಗಡಿಯಾರ ತಯಾರಿಸಿದರೇನು ಎನ್ನುವ ಅನುಮಾನ ಬರುವಷ್ಟು ಸಾಮ್ಯತೆ ಕಂಡುಬರುತ್ತದೆ. ವೈಜ್ಞಾನಿಕವಾಗಿ ಒಂದಷ್ಟು ಕುತೂಹಲ ಕೆರಳುವುದು ಪ್ರಕೃತಿಯ ಇಂತಹ ಅದ್ಭುತ ಸೃಷ್ಟಿಯನ್ನು ನೋಡಿದಾಗ ಮಾತ್ರ.

–ಜಯಂತಿ ರಾಘವೇಂದ್ರ, ಆಗುಂಬೆ

